~ಮುಂಜಾನೆ ಮಾತು~
ಯಶಸ್ಸು ಅಂತರಂಗಕ್ಕೆ ಪ್ರವೇಶಿಸಿ ಅಪ್ಪಿಕೊಳ್ಳುತ್ತದೆ. ಆದರೆ ಸೋಲು ಸಾರ್ವಜನಿಕವಾಗಿ ನಮ್ಮನ್ನು ಬೆತ್ತಲೆಗೊಳಿಸಿಬಿಡಬಹುದು. ಸೋಲಿನೊಂದಿಗೆ ಸೆಣಸುವಾಗ ಎಚ್ಚರ ಅಗತ್ಯ!

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ
ಕನ್ನಡಿಗರ ಧ್ವನಿ

ಬೆಂಗಳೂರು • ಮಂಗಳೂರು • ಹುಬ್ಬಳ್ಳಿ • ವಿಜಯಪುರ • ಮೈಸೂರು • ಗಂಗಾವತಿ • ಚಿತ್ರದುರ್ಗ • ಶಿವಮೊಗ್ಗ • ಕಲಬುರಗಿ • ಬೆಳಗಾವಿ
VIJAYAVANI MANGALURU | ಮಂಗಳೂರು | ಸಂಪುಟ 6 • ಸಂಚಿಕೆ 24
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682
24 ಏಪ್ರಿಲ್ 2017 | ಸೋಮವಾರ | 24 APRI



ವಿಜಯವಾಣಿ ಎಕ್ಸ್‌ಕ್ಲೂಸಿವ್

# ದ್ವೀಪವಾಸಿಗಳ ನಾಗರಿಕ ಬದುಕಿನ ಸಂಕಷ್ಟ

## ಪಾವೂರು ಉಳಿಯ ಅಭಿವೃದ್ಧಿಗೆ 'ಟೀಮ್ ಟ್ರಿಗೋನ್' ಸಾಥ್


- ಪಾವೂರು ಉಳಿಯ ದ್ವೀಪದಲ್ಲಿ ಕೊರತೆಗಳ ಪಟ್ಟಿಯೇ ದೊಡ್ಡದು
- ಅನುಷ್ಠಾನವಾಗಬೇಕಿದ್ದ ತೂಗುಸೇತುವೆ ನಿರ್ಮಾಣ ಯೋಜನೆಯೂ ರದ್ದು
- ತೂಗುಸೇತುವೆ ಮೇಲೆ ನಡೆಯುವ ಕನಸು ಕಾಣಿರಿ ಎಂಬ ಖಾದರ್ ಭರವಸೆ ಭರವಸೆಯಾಗಿಯೇ ಬಾಕಿ
- ಟೀಮ್ ಟ್ರಿಗೋನ್‌ನಿಂದ ಪಾವೂರು ಉಳಿಯ ದ್ವೀಪದ ಸಮಸ್ಯೆ ಬಗೆಹರಿಸಲು ಪ್ರಯತ್ನ

**ಪ್ರಕಾಶ್ ಮಂಜೇಶ್ವರ** ಮಂಗಳೂರು

ಮನೆಗೆ 100 ಗ್ರಾಂ ಸಕ್ಕರೆ ತರಬೇಕಿದ್ದರೂ ದೋಣಿಯಲ್ಲಿ ನದಿ ದಾಟಿ ಸುಮಾರು 1.5 ಕಿ.ಮೀ. ದೂರ ಪ್ರಯಾಣಿಸಬೇಕು. ಮಳೆ ನೆರೆ ಬಂತೆಂದರೆ ಗ್ರಾಮದ ಮಕ್ಕಳು ಶಾಲೆಗೆ ಚಕ್ಕರ್ ಖಚಿತ. ಇದ್ದ ಒಂದು ಕಿರಿಯ ಪ್ರಾಥಮಿಕ ಶಾಲೆ ಮುಚ್ಚಿ ಆರು ವರ್ಷಗಳೇ ಕಳೆದಿವೆ. ತುರ್ತು ವೈದ್ಯಕೀಯ ಸೇವೆ ಅಗತ್ಯ ಉಳ್ಳವರು ಪ್ರಾಣದ ಆಸೆ ಬಿಟ್ಟೇ ಗ್ರಾಮದಲ್ಲಿ ನೆಲೆಸಬೇಕು...!

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಅಡ್ಯಾರ್‌ನಿಂದ ಅನತಿ ದೂರದಲ್ಲಿ ಹರಿಯುವ ನೇತ್ರಾವತಿ ನದಿಯ ಇನ್ನೊಂದು ಮಗ್ಗುಲಲ್ಲಿ ಗೋಚರಿಸುವ ಪಾವೂರು ಉಳಿಯ ದ್ವೀಪದ ಕೊರತೆಗಳ ಪಟ್ಟಿ ಮಾಡಿದರೆ ಅದು ಬೆಳೆಯುತ್ತಲೇ ಹೋಗುತ್ತದೆ. ಆದ್ದರಿಂದಲೇ ಇಲ್ಲಿ ಹೊಸ ಮನೆಗಳು ನಿರ್ಮಾಣವಾಗುತ್ತಿಲ್ಲ. ಇಲ್ಲಿನ ಸುಮಾರು 55 ಎಕರೆ ಜಾಗದಲ್ಲಿ ಸುಮಾರು 38 ಕುಟುಂಬಗಳು ವಾಸಿಸುತ್ತಿವೆ. ಹಿಂದೆ ಇಲ್ಲಿ 50ರಷ್ಟು ಕುಟುಂಬಗಳು ಇದ್ದು, ಸ್ವಲ್ಪ ಮಟ್ಟಿನ ಅನುಕೂಲ ಇದ್ದ ಕೆಲವು ಕುಟುಂಬಗಳು ಹೊರಗೆ ತಾತ್ಕಾಲಿಕವಾಗಿ ನೆಲೆಸಿದ್ದಾರೆ. ದ್ವೀಪ ನಿವಾಸಿಗಳಲ್ಲಿ ಒಂದು ಪರಿಶಿಷ್ಟ ಜಾತಿಯ ಕುಟುಂಬವಾಗಿದ್ದು, ಉಳಿದವುಗಳು ಕ್ರಿಶ್ಚಿಯನ್ ಕುಟುಂಬಗಳು. ಇಲ್ಲಿರುವ ಏಕೈಕ ಸುಸಜ್ಜಿತ ಕಟ್ಟಡ 1968ರಲ್ಲಿ ನಿರ್ಮಿಸಿದ ಇನ್ಫೆಂಟ್ ಜೀಸಸ್ ಚಾಪೆಲ್. ವಾರದಲ್ಲಿ ಒಂದು ದಿನ ಫರಂಗಿಪೇಟೆಯಿಂದ ಧರ್ಮಗುರುವೊಬ್ಬರು ಇಲ್ಲಿಗೆ ಆಗಮಿಸುತ್ತಾರೆ. ಕೆಲವರ್ಷಗಳ ಹಿಂದೆ ಚಾಪೆಲ್ ನವೀಕರಣಗೊಂಡಿದೆ.

ಚಿತ್ರಗಳು: ವಿಜಯವಾಣಿ



ಪಾವೂರು ಉಳಿಯ ದ್ವೀಪದ ದೃಶ್ಯ



ಮುಚ್ಚಲ್ಪಟ್ಟಿರುವ ಪಾವೂರು -ಉಳಿಯ ದ್ವೀಪದ ಶಾಲೆ.



ಪಾವೂರು ಉಳಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪೂರ್ಣ ರೂಪದ ಏಕೈಕ ದ್ವೀಪ. ಯುರೋಪ್ ರಾಷ್ಟ್ರಗಳಲ್ಲಿ ಜನರು ಕೃತಕ ದ್ವೀಪಗಳನ್ನು ನಿರ್ಮಿಸುತ್ತಾರೆ. ಇಲ್ಲಿ ನಾವು ಇರುವ ದ್ವೀಪಗಳನ್ನು ಉಳಿಸಲು ಹೋರಾಟ ನಡೆಸಬೇಕಾಗಿದೆ. ದ್ವೀಪವಾಸಿಗಳಿಗೆ ಸಂಪರ್ಕ ಸೇತುವೆ, ನೀರಿನ ಸೌಲಭ್ಯ ಒದಗಿಸಿದರೆ ಸ್ಥಳೀಯ ನಿವಾಸಿಗಳಿಗೆ ನಾಗರಿಕ ಸೌಲಭ್ಯಗಳು ದೊರೆಯುವುದರ ಜತೆಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಕೂಡ ಅವಕಾಶವಿದೆ.

| ಅಲಿಸ್ಟರ್ ಸುಜಿತ್ ಲಸ್ರಾದೊ
ಸಂಘಟಕ, ಟೀಮ್ ಟ್ರಿಗೋನ್

## ನೋವಿನ ದನಿ

ದ್ವೀಪದ ಸುತ್ತ ನೇತ್ರಾವತಿ ನದಿ ಜುಳುಜುಳು ಸುದ್ದು ಮಾಡುತ್ತ ಹರಿಯುತ್ತಿದ್ದು, ಹೊರಗಿನ ಪ್ರಪಂಚಕ್ಕೆ ಸಂಪರ್ಕ ಬೆಳೆಸಬೇಕಿದ್ದರೆ ನಾಡದೋಣಿಗಳಷ್ಟೇ ಆಸರೆ. ಅಡ್ಯಾರ್ ಸಂಪರ್ಕಿಸಲು ಅನುಕೂಲವಾಗುವಂತೆ ಸೇತುವೆ ನಿರ್ಮಿಸುವಂತೆ ಹಲವು ದಶಕಗಳಿಂದ ಸ್ಥಳೀಯ ನಿವಾಸಿಗಳು ಹೋರಾಟ ಮಾಡುತ್ತಿದ್ದರೂ ಫಲ ನೀಡಿಲ್ಲ ಎಂಬುದನ್ನು ಸಕಾಲದಲ್ಲಿ ಚಿಕಿತ್ಸೆ ದೊರೆಯದೆ ದಾರಿ ಮಧ್ಯೆಯೇ ಪ್ರಾಣ ತ್ಯಜಿಸಿದ ತನ್ನ ಪತಿ ಬೇರಿಯಲ್ ಡಿಸೋಜ ಬಗ್ಗೆ ಅವರ ಪತ್ನಿ ಫ್ಲೇವಿ ನೆನಪಿಸಿಕೊಳ್ಳುತ್ತಾರೆ. ಚಿಕಿತ್ಸೆಗೆ ಹೋಗುವ ದಾರಿ ಮಧ್ಯೆ ಅಸುನೀಗಿದ ಹೆರಾಲ್ಡ್ ಡಿಸೋಜ ಎಂಬುವರ ಕುರಿತು ಅವರ ಮಗಳು ಸ್ವೀಟಿ ಹನಿಗಣ್ಣಿನಿಂದಲೇ ಕಹಿ ಅನುಭವ ಹಂಚಿಕೊಂಡರು. ಕಪಿತಾನಿಯೋ ಶಿಕ್ಷಣ ಸಂಸ್ಥೆಯ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಪ್ರತಿಶಾ ಮರಿಯಾ ಶಾಲಾ ವಿದ್ಯಾರ್ಥಿಗಳು ಅನುಭವಿಸುವ ಸಂಕಷ್ಟವನ್ನೂ ಬಿಚ್ಚಿಟ್ಟರು.

ಪಾವೂರು ಉಳಿಯ ಪ್ರದೇಶಕ್ಕೆ ತೂಗುಸೇತುವೆ ನಿರ್ಮಿಸಲು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಈ ಹಿಂದೆ 1.75 ಕೋಟಿ ರೂ.ಬಿಡುಗಡೆಯಾಗಿತ್ತು. ತೂಗುಸೇತುವೆ ತಜ್ಞ ಗಿರೀಶ್ ಭಾರದ್ವಾಜ್ ಮತ್ತು ಸಂಬಂಧಪಟ್ಟ ತಜ್ಞರನ್ನು ಕರೆದೊಯ್ದು ಸುಮಾರು 3.50 ಕೋಟಿ ರೂ. ಯೋಜನೆ ರೂಪಿಸಿದ್ದೆ. ಜನರು ಕನಿಷ್ಠ ದ್ವಿಚಕ್ರ ವಾಹನ ಸಂಚರಿಸುವ ಸೇತುವೆ ಬೇಕು ಎಂದು ಒತ್ತಾಯಿಸಿದರು. ಯೋಜನೆ ಮೊತ್ತ ಮತ್ತೆ ವಿಸ್ತರಿಸಿತು. ಉತ್ತಮ ಸಂಪರ್ಕ ಸೇತುವೆ ನಿರ್ಮಿಸುವ ಉದ್ದೇಶದಿಂದ ಮುಖ್ಯಮಂತ್ರಿಗಳ 5.5 ಕೋಟಿ ರೂ. ವಿಶೇಷ ನಿಧಿಗೆ ಪ್ರಯತ್ನಿಸುತ್ತಿದ್ದೇನೆ.



| ಯು.ಟಿ.ಖಾದರ್
ಕ್ಷೇತ್ರದ ಶಾಸಕ, ಆಹಾರ ಸಚಿವರು.



ಉಳಿಯ ಚಾಪೆಲ್.

## ಅನುಷ್ಠಾನವಾಗದ ಯೋಜನೆ

2015ರಲ್ಲಿ ಇಲ್ಲಿ ತೂಗುಸೇತುವೆ ನಿರ್ಮಿಸಲು ರಾಜ್ಯ ಸರ್ಕಾರ 1.50 ಕೋಟಿ ರೂ. ಮಂಜೂರು ಮಾಡಿದ್ದು, ಯೋಜನೆ ಅನುಷ್ಠಾನವಾಗದೆ ಈಗ ರದ್ದಾಗಿದೆ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭ ಮತ ಕೇಳಲು ಆಗಮಿಸಿದ್ದ ಯು.ಟಿ.ಖಾದರ್ ಅವರು 'ನೀವು ಸೇತುವೆ ಮೇಲೆ ನಡೆಯುವ ಕನಸು ಕಾಣಿರಿ. ಸೇತುವೆ ನಿರ್ಮಾಣ ಜವಾಬ್ದಾರಿ ನನ್ನದು' ಎಂಬ ಭರವಸೆ ನೀಡಿದ್ದರು. ಖಾದರ್ ಚುನಾವಣೆಯಲ್ಲಿ ಗೆದ್ದ ಇಂದು ಸಚಿವರಾಗಿದ್ದಾರೆ. ಆದರೆ ನಮ್ಮ ಕನಸು ಈಡೇರಲೇ ಇಲ್ಲ ಎಂದು ಸ್ಥಳೀಯ ನಿವಾಸಿಗಳು ನಿರಾಶೆ ವ್ಯಕ್ತಪಡಿಸುತ್ತಾರೆ.

## ಸಹ್ಯಾದ್ರಿ ವಿದ್ಯಾರ್ಥಿಗಳ ಸಾರಥ್ಯ

ಕಳೆದ ಒಂದು ವರ್ಷದಿಂದ ದ್ವೀಪದ ಸಮಗ್ರ ಸಮೀಕ್ಷೆ ನಡೆಸಿರುವ ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ 14 ವಿದ್ಯಾರ್ಥಿಗಳ 'ಟೀಮ್ ಟ್ರಿಗೋನ್' ತಂಡ ಗ್ರಾಮದ ಅಭಿವೃದ್ಧಿಗೆ ಮುಖ್ಯವಾಗಿ ಮೂರು ತುರ್ತು ಅವಶ್ಯಕತೆಗಳನ್ನು ಮನಗಂಡಿದೆ. ಅಡ್ಯಾರು ಸಂಪರ್ಕ ಸೇತುವೆ, ನೀರು ಶುದ್ಧೀಕರಣ ಘಟಕ ಹಾಗೂ ತ್ಯಾಜ್ಯ ನಿರ್ವಹಣೆ ವ್ಯವಸ್ಥೆ. ಗ್ರಾಮಸ್ಥರ ಬೇಡಿಕೆ ಈಡೇರಿಕೆಗಾಗಿ ಸ್ಥಳೀಯ ಶಾಸಕ, ರಾಜ್ಯ ಆಹಾರ ಸಚಿವ ಯು.ಟಿ.ಖಾದರ್ ಹಾಗೂ ಸ್ಥಳೀಯಾಡಳಿತ ಸಂಸ್ಥೆಗಳ ಮುಖ್ಯಸ್ಥರಿಗೆ ಈ ವಿದ್ಯಾರ್ಥಿ ಸಂಘಟನೆ ನಿರಂತರ ಒತ್ತಡ ಹೇರುತ್ತಲೇ ಇದೆ. ಜತೆಗೆ ಸುದ್ದಿ, ದೃಶ್ಯ ಮಾಧ್ಯಮಗಳ ಜತೆ ಸಾಮಾಜಿಕ ಜಾಲತಾಣಗಳ ಮೂಲಕವೂ ಪಾವೂರು ಉಳಿಯ ನಿವಾಸಿಗಳ ಸಂಕಷ್ಟವನ್ನು ಜಗತ್ತಿನ ಮುಂದಿಡುವ ಪ್ರಯತ್ನ ನಡೆಸುತ್ತಲೇ ಇದೆ. ಈ ಕುರಿತು ಪ್ರಧಾನಿಯವರಿಗೂ ಪತ್ರ ಬರೆಯಲಾಗಿದೆ.



ಪಾವೂರು ಉಳಿಯದಲ್ಲಿ ಸಮೀಕ್ಷೆ ಕೈಗೊಂಡ ಸಹ್ಯಾದ್ರಿ ವಿದ್ಯಾರ್ಥಿಗಳ ತಂಡ ಟ್ರಿಗೋನ್ ಟೀಮ್‌ನ ಸದಸ್ಯರು.

ಸೋಮವಾರ 24.4.2017
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
51 ವರ್ಷ • ಸಂಚಿಕೆ 113 • ಪುಟ 12+4 • ಬೆಲೆ ₹5
epaper.kannadaprabha.in

ಹೆಣ್ಣುಮಗು ಹೆತ್ತಿದ್ದಕ್ಕೆ ರಾಷ್ಟ್ರೀಯ ನೆಟ್‌ಬಾಲ್ ಆಟಗಾರ್ತಿಗೆ ತಲಾಖ್ 9

ಕೋಲ್ಕತಾದಲ್ಲಿ ದೇಶದ ಮ… ಜಲ ಸುರಂಗ ಮೆಟ…

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

CENTRAL LIBRARY



ರಾಜಕುಮ… ಟಿಕೆಟ್‌ಗೆ ಶೇ.5…
ಇಂದು ಡಾ.ರಾಜ್‌ಕ… ನಿಮಿತ್ತ ರಾಜ್ಯದ ಒತ್ತ ಮ…

ಸ್ಪೆಷಲ್!

# ಪೇಟೆಯಿಂದ ಕಣ್ಣಳತೆ ದೂರದ ಬದುಕು 'ದ್ವೀಪಸದೃಶ'

## ನದಿ ನಡುವೆ ಇದ್ದರೂ ಕುಡಿಯಲು ಶುದ್ಧ ನೀರಿಲ್ಲ, ಸಂಚಾರಕ್ಕೆ ಸೇತುವೆಯಿಲ್ಲ, ಆಸ್ಪತ್ರೆಯಿಲ್ಲ, ಮೂಲಸೌಕರ್ಯವಿಲ್ಲ

• **ಮೌನೇಶ ವಿಶ್ವಕರ್ಮ** ಬಂಟ್ವಾಳ

ಸುತ್ತಮುತ್ತಲೂ ನೀರಿದೆ.. ಆದರೆ ಕುಡಿಯಲು ಸಾಧ್ಯವಿಲ್ಲ, ಊರು ಕಣ್ಣಳತೆಯ ದೂರದಲ್ಲಿದೆ.. ಆದರೆ ಬೇಗ ತಲುಪಲು ಸಾಧ್ಯವಿಲ್ಲ. ಶಾಲೆ ಮನೆ ಬಾಗಿಲಲ್ಲೇ ಇದೆ.. ಆದರೆ ಮುಚ್ಚಲ್ಪಟ್ಟಿದೆ... ಹೀಗೆ ಸಮಸ್ಯೆಯ ಮೇಲೆ ಸಮಸ್ಯೆಗಳನ್ನು ಎದುರು ನೋಡುತ್ತಾ ದಿನ ಕಳೆಯುತ್ತಿದೆ ಈ ದ್ವೀಪದ ಜನತೆ.

ಇದು ಮಂಗಳೂರು ತಾಲೂಕಿನ ಪಾವೂರು ಗ್ರಾಮದ ಉಳಿಯ ದ್ವೀಪದ ಜನತೆಯ ಸಂಕಟ. ಮನೆಗೆ ಹೋಗಲು ಸರಿಯಾದ ದಾರಿ ಇಲ್ಲ, ಕುಡಿಯುವ ನೀರಿನ ಸೌಕರ್ಯ ಇಲ್ಲ, ಶಾಲೆ ಇಲ್ಲ, ಆಸ್ಪತ್ರೆ ಇಲ್ಲ... ಹೀಗಾದ್ರೆ ನಾವು ಹೇಗೆ ಸ್ವಾಮೀ ಬದುಕೋದು? ಎಂಬುದು ಇಲ್ಲಿನವರ ಆಕ್ರೋಶದ ನುಡಿ.

ಅಡ್ಯಾರಿನ ನೇತ್ರಾವತಿ ನದಿ ತಟದಿಂದ ಕಣ್ಣಳತೆಯ 300 ಮೀಟರ್ ದೂರದಲ್ಲಿರುವ ಈ ಉಳಿಯ ದ್ವೀಪ ಪಾವೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿದೆ. ನೇತ್ರಾವತಿ ಸಮುದ್ರ ಸೇರುವ ಹಿನ್ನೀರಿನ ಪ್ರದೇಶವಾಗಿರುವುದರಿಂದ, ಜನವರಿಯ ಬಳಿಕ ನೀರೆಲ್ಲಾ ಉಪ್ಪು ಉಪ್ಪೇ.

ಆದರೆ ಕಳೆದ ಕೆಲವು ವರ್ಷಗಳಿಂದ ಸ್ಥಳೀಯ ಪರಿಸರದಲ್ಲಿ ಹೆಚ್ಚಾಗಿರುವ ಮರಳುಗಾರಿಕೆ ಈ ದ್ವೀಪಕ್ಕೆ ಶಾಪವಾಗಿ ಪರಿಣಮಿಸುತ್ತಿದೆ. ಸಮುದ್ರದ ಹಿನ್ನೀರಿನ ಪ್ರಮಾಣ ಹೆಚ್ಚಾಗಿ ಈ ದ್ವೀಪದ ಬಾವಿ ನೀರಿನಲ್ಲಿ ವರ್ಷಪೂರ್ತಿ ಉಪ್ಪಿನ ಅಂಶವೇ ಸೇರಿಕೊಂಡಿದೆ.!

ಈ ಹಿಂದೆ ನಮ್ಮ ಬಾವಿಗಳಲ್ಲಿ ವರ್ಷಪೂರ್ತಿ ಸಿಹಿನೀರು ಸಿಗುತ್ತಿತ್ತು. ಬತ್ತ, ರಾಗಿ, ಕಬ್ಬು, ಮೆಣಸು, ಗೆಣಸು ಬೆಳೆಯುತ್ತಿದ್ದೆವು. ಬಾವಿಯ ನೀರು ವರ್ಷಪೂರ್ತಿ ತರಕಾರಿ ಬೆಳೆಸಲು ಸಹಕಾರಿಯಾಗುತ್ತಿತ್ತು. ಆದರೆ ಈಗ ಇಲ್ಲಿನ ಮಣ್ಣಿನಲ್ಲಿ ಉಪ್ಪಿನಂಶ ಹೆಚ್ಚಾಗಿದೆ ಎನ್ನುತ್ತಾರೆ ಇಲ್ಲಿನ ನಿವಾಸಿಗಳು.

**ವಲಸೆ ಹೋಗುತ್ತಿದ್ದಾರೆ!:** ಉಳಿಯ ದ್ವೀಪದಲ್ಲಿ 58 ಕುಟುಂಬಗಳಿತ್ತು. ಆದರೆ ಹಲವು ಮೂಲಭೂತ ವ್ಯವಸ್ಥೆ ಇಲ್ಲದ ಹಿನ್ನಲೆಯಲ್ಲಿ ಸುಮಾರು 16 ಕುಟುಂಬಗಳು ಈ ದ್ವೀಪದಿಂದ ವಲಸೆ ಹೋಗಿವೆ. ನಾಡದೋಣಿಯ ಮೂಲಕ ನದಿಯಲ್ಲಿ ಸಾಗಿ ಮೀನು ಹಿಡಿಯುವುದು ಇಲ್ಲಿನವರ ಕಸುಬು. ಆದರೆ ಮರಳುಗಾರಿಕೆ ಇವರ ಈ ಕಸುಬಿಗೂ ಕಂಟಕವಾಗಿ ಪರಿಣಮಿಸಿದೆ.

ಇಲ್ಲಿನ ಜನತೆ ಪ್ರತಿಯೊಂದು ಅಗತ್ಯಗಳಿಗೂ ನಗರದತ್ತ ನೋಡಬೇಕಾಗಿದೆ. ಪಡಿತರ ಸಾಮಾಗ್ರಿ ಬೇಕಾದಲ್ಲಿ ದ್ವೀಪದ ಮತ್ತೊಂದು ದಿಕ್ಕಿನಿಂದ ಪಯಣಿಸಿ ನದಿ ದಾಟಿ ಪಾವೂರು ಕಡೆಗೆ ಹೋಗಬೇಕಿದೆ. ಆಹಾರ ಸಚಿವರ ಕ್ಷೇತ್ರದಲ್ಲೇ ಆಹಾರಕ್ಕಾಗಿ ಹಾಹಾಕಾರ..! ಎನ್ನುವಂತಿದೆ ಇಲ್ಲಿನ ಸ್ಥಿತಿ.

**ಶಾಲೆ ಎಂದರೆ ಸಾಹಸ:** ಈ ದ್ವೀಪದ ಮಕ್ಕಳು ಶಾಲೆಗೆ ತೆರಳುವುದೆಂದರೆ ದೊಡ್ಡ ಸಾಹಸವೇ ಸರಿ. ಈ ದ್ವೀಪದಲ್ಲೇ ಒಂದು ಕಿ.ಪ್ರಾ. ಶಾಲೆಯಿತ್ತು. ಇಲ್ಲಿಗೆ ಬರುತ್ತಿದ್ದ ಶಿಕ್ಷಕಿಯೂ ನದಿ ದಾಟಿಯೇ ಬರುತ್ತಿದ್ದರು. ಆದರೆ ಇಲ್ಲಿನ ಸಮಸ್ಯೆಗಳಿಂದಾಗಿ ಆರೇಳು ವರ್ಷದ ಹಿಂದೆ ಶಾಲೆ ಮುಚ್ಚಿ ಹೋಯಿತು. ಅಂಗನವಾಡಿ ಕೇಂದ್ರವೂ ಇಲ್ಲಿಲ್ಲ. ಹಾಗಾಗಿ ಶಾಲೆಯ ಮುಖ ನೋಡಬೇಕಾದಲ್ಲಿ ನದಿ ದಾಟಲೇ ಬೇಕಾದ ಅನಿವಾರ್ಯತೆ ಇಲ್ಲಿ ಸೃಷ್ಟಿಯಾಗಿದೆ.

**ಜೀವಕ್ಕೆ ಸಂಚಕಾರ:** ಮೂರು ವರ್ಷದ ಹಿಂದೆ ಹೆರಾಲ್ಡ್ ಡಿಸೋಜ ಎಂಬವರಿಗೆ ಎದೆ ನೋವು ಕಾಣಿಸಿಕೊಂಡು ನದಿ ದಾಟಲು ಅವರೇ ಸ್ವತಃ ದೋಣಿ ಚಲಾಯಿಸಿ ಸಾಗಿದ್ದರು. ಆದರೆ ಆಗ ಅವರಿಗಾದ ಆಯಾಸ ಅವರನ್ನೇ ಬಲಿತೆಗೆದುಕೊಳ್ಳುವಂತೆ ಮಾಡಿತ್ತು ಎನ್ನುತ್ತಾ ಕಣ್ಣೀರು ಹಾಕಿದಳು ಅವರ ಪುತ್ರಿ ಸ್ವೀಟಿ.

**ಕನಸಾಗಿಯೇ ಉಳಿಯಿತು ಸೇತುವೆ..!':** ಅಡ್ಯಾರಿನಿಂದ ಪಾವೂರು ಉಳಿಯವನ್ನು ಸಂಪರ್ಕಿಸಲು ಸುಮಾರು 300 ಮೀಟರ್ ಉದ್ದದ ಸೇತುವೆ ನಿರ್ಮಾಣಗೊಂಡರೆ ಈ ದ್ವೀಪದ ಬಹುದೊಡ್ಡ ಬೇಡಿಕೆ ಈಡೇರಿದಂತೆ. ಆದರೆ ಅದಿನ್ನೂ ಕನಸಾಗಿಯೇ ಉಳಿದಿದೆ. 1.50 ಕೋಟಿ ಅನುದಾನದಲ್ಲಿ ಸೇತುವೆ ಪ್ರಸ್ತಾವನೆ ಕಳುಹಿಸಲಾಗಿದೆ, ನಾನಿನ್ನು ಸೇತುವೆ ಆದ ಮೇಲೆ ಬರುತ್ತೇನೆ, ಸೇತುವೆ ಬಗ್ಗೆ ಕನಸು ಕಾಣಿರಿ ಎಂದು ಮೂರು ವರ್ಷದ ಹಿಂದೆ ಹೇಳಿ ಹೋಗಿದ್ದ ಕ್ಷೇತ್ರದ ಶಾಸಕ, ಆಹಾರ ಸಚಿವ ಯು.ಟಿ.ಖಾದರ್ ಮತ್ತೆ ಇತ್ತ ಬಂದಿಲ್ಲ ಎನ್ನುವುದು ಇಲ್ಲಿನ ನಿವಾಸಿಗಳ ಬೇಸರದ ಮಾತು.



ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಟ್ರೈಗಾನ್ ಟೀಂ.

ಉಳಿಯ ದ್ವೀಪವನ್ನು ಅಡ್ಯಾರುವಿನಿಂದ ಸಂಪರ್ಕಿಸಲು ತೂಗು ಸೇತುವೆ ನಿರ್ಮಾಣಕ್ಕೆ ಮೂರು ವರ್ಷದ ಹಿಂದೆ ಯೋಜನೆ ರೂಪಿಸಲಾಗಿತ್ತು. 1.75 ಕೋಟಿ ರುಪಾಯಿಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ತೂಗು ಸೇತುವೆಯಲ್ಲಿ ಬೈಕ್ ಸಂಚರಿಸಲು ಅವಕಾಶ ಬೇಕೆಂಬ ಬೇಡಿಕೆ ಬಂದ ಹಿನ್ನಲೆಯಲ್ಲಿ ತೂಗುಸೇತುವೆಯ ಅಂದಾಜು ವೆಚ್ಚ 5.5 ಕೋಟಿ ರುಪಾಯಿಗೆ ಏರಿತ್ತು. ಮುಖ್ಯಮಂತ್ರಿಗಳಲ್ಲಿ ವಿಶೇಷ ಅನುದಾನದ ಬೇಡಿಕೆ ಇರಿಸಿದ್ದೇನೆ.

• **ಯು.ಟಿ.ಖಾದರ್**, ಆಹಾರ ನಾಗರಿಕ ಪೂರೈಕೆ ಸಚಿವ

### ಭರವಸೆ ಹೆಚ್ಚಿಸಿದ ಟ್ರೈಗಾನ್ ಟೀಮ್..

ಉಳಿಯ ದ್ವೀಪದ ಸಮಸ್ಯೆಗಳತ್ತ ಬೆಳಕು ಚೆಲ್ಲುವ ಮೂಲಕ ದ್ವೀಪದ ನಿವಾಸಿಗಳಿಗೆ ಹೊಸ ಬದುಕು ಕಟ್ಟಿಕೊಡಲು ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ 14 ವಿದ್ಯಾರ್ಥಿಗಳ ಟ್ರೈಗಾನ್ ತಂಡ ಮುಂದಾಗಿದೆ.

ಈ ಬಗ್ಗೆ ಪ್ರಧಾನಮಂತ್ರಿಯವರಿಗೂ ಪತ್ರ ಬರೆದಿರುವ ತಂಡ, ದ್ವೀಪದ ನಿವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸುವಂತೆ ಕೋರಿದ್ದಾರೆ. ತಂಡದ ನಾಯಕ ಅಲಿಸ್ಟರ್ ಸುಜಿತ್ ಲಸ್ರಾದೋ, ತಂಡ ಕೈಗೊಂಡಿರುವ ಯೋಜನೆಗಳ ಕುರಿತಾಗಿ ಮಾಧ್ಯಮಗಳಿಗೆ ವಿವರ ನೀಡಿದ್ದು, ಮೂರು ಮುಖ್ಯ ಗುರಿಗಳ ಈಡೇರಿಕೆ ಶ್ರಮಿಸುವುದಾಗಿ ತಿಳಿಸಿದರು.

ಟ್ರೈಗಾನ್ ತಂಡದಲ್ಲಿ ಆ್ಯಲೆನ್, ಜೋನಾಥನ್, ಶ್ವೇತಾ, ಅಕ್ಷಯ್, ಮಹಮ್ಮದ್ ಇಶ್ಫಕ್, ಝೀವಿನ್ ಮರಿಯಾ, ಚೈತ್ರಾ, ಅಮೀನ್ ನಝೀರ್, ವಿನ್ಸನ್, ಸುರಕ್ಷಾ, ಸಮನ್ ಆಯುಬ್, ರಕ್ಷಾ, ರಶ್ಮಿತಾ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಮಾದರಿ ವಿದ್ಯಾರ್ಥಿಗಳೆನ್ನಿಸಿದ್ದಾರೆ.

ಈ ದ್ವೀಪದ ಜನತೆ ತಮ್ಮ ಚಿಕ್ಕ ಚಿಕ್ಕ ಅಗತ್ಯಗಳಿಗೂ ನದಿ ದಾಟಬೇಕಾಗುತ್ತದೆ. ಆರೋಗ್ಯ ಹದಗೆಟ್ಟರಂತೂ ಇಲ್ಲಿನವರ ಪಾಡು ಹೇಳತೀರದು. ನಮ್ಮಲ್ಲಿ ಆರೋಗ್ಯ ಸೇವೆಯೂ ಇಲ್ಲ, ಆಸ್ಪತ್ರೆಗೆ ಹೋಗ ಬೇಕಾದರೆ ಅಡ್ಯಾರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಥವಾ ಮಂಗಳೂರಿಗೆ ಹೋಗಬೇಕು. ಪ್ರಯಾಣ ದುಸ್ತರವಾದ ಕಾರಣದಿಂದಲೇ ಈ ನದಿ ತಟದಲ್ಲಿಯೇ ಹಲವರು ಪ್ರಾಣಬಿಡುವಂತಾಗಿದೆ

• **ಫ್ಲೇವಿ ಡಿ'ಸೋಜಾ** ಸ್ಥಳೀಯ ನಿವಾಸಿ

BM ಭಾರತ್ ಮಾರ್ಕೆಟಿಂಗ್
ಉಡುಪಿಯಲ್ಲಿಯೇ ಅತೀ ದೊಡ್ಡ ಇಲೆಕ್ಟ್ರಿಕಲ್ ಶೋರೂಂ
ಸ್ಪರ್ಧಾತ್ಮಕ ದರದಲ್ಲಿ ಎಲ್ಲಾ ಬಗೆಯ ಗೃಹೋಪಯೋಗಿ ವಿದ್ಯುತ್ ಉಪಕರಣಗಳು ದೊರೆಯುತ್ತವೆ.
Call: 0820-2530903
ಪಂದುಬೆಟ್ಟು, ಮಲ್ಪೆ ರೋಡ್, ಆದಿ ಉಡುಪಿ

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಎಪ್ರಿಲ್ 23, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 16+8+4

# ಪಾವೂರು ಉಳಿಯ ದ್ವೀಪ ಸೇತುವೆ, ನೀರು ಶುದ್ಧೀಕರಣ ಘಟಕ ಸೌಲಭ್ಯಕ್ಕೆ ಆಗ್ರಹ

ಮಂಗಳೂರು, ಎ. 22: ಅಡ್ಯಾರು ಸಮೀಪ ನೇತ್ರಾವತಿ ನದಿಯ ನಡುವೆ ಇರುವ ಪಾವೂರು ಉಳಿಯ ದ್ವೀಪ ಪ್ರದೇಶಕ್ಕೆ ಸಾರಿಗೆ ಸಂಪರ್ಕಕ್ಕಾಗಿ ಸೇತುವೆ ನಿರ್ಮಿಸಬೇಕು ಹಾಗೂ ಕುಡಿಯುವ ನೀರು ಸೌಲಭ್ಯಕ್ಕಾಗಿ ನದಿ ನೀರು ಶುದ್ಧೀಕರಣ ಘಟಕ ಸ್ಥಾಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಾದ ಅಲಿಸ್ಟರ್ ಸುಜಿತ್ ಲಸ್ರಾದೊ, ಅಲನ್ ಲೋಯ್ ಡಿ'ಸೋಜಾ, ಜೊನಾಥನ್ ಆ್ಯಡ್ರಿಯಲ್ ರೊಡ್ರಿಗಸ್ ಮತ್ತು ಇತರ 11 ಮಂದಿ ಸೇರಿದಂತೆ 14 ಮಂದಿಯ ತಂಡ ಸಮಾಜ ಸೇವಾ ಚಟುವಟಿಕೆಯ ಭಾಗವಾಗಿ ಈ ದ್ವೀಪದ ಸಮೀಕ್ಷೆಯನ್ನು ಕೈಗೆತ್ತಿಕೊಂಡಿದ್ದು, ದ್ವೀಪ ನಿವಾಸಿಗಳ ಸಮಸ್ಯೆಗಳ ಕುರಿತು ತಂಡದ ಸದಸ್ಯರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಈ ದ್ವೀಪ ಪ್ರದೇಶವು ಪಾವೂರು ಗ್ರಾ.ಪಂ. ವ್ಯಾಪ್ತಿಗೆ ಬರುತ್ತಿದ್ದು 55 ಎಕರೆ ವಿಸ್ತೀರ್ಣವಿದೆ. 35 ಕುಟುಂಬಗಳು ವಾಸವಾಗಿವೆ. ಸುಮಾರು 150 ಜನರಿದ್ದು 40 ವಿದ್ಯಾರ್ಥಿಗಳಿದ್ದಾರೆ. ಮಂಗಳೂರಿನಿಂದ 12 ಕಿ.ಮೀ. ದೂರವಿದ್ದು ನಾಡ ದೋಣಿ ಏಕೈಕ ಸಾರಿಗೆ ಸಾಧನವಾಗಿದೆ. ಬಾವಿಗಳಲ್ಲಿ ಉಪ್ಪು ನೀರು ಬರುತ್ತಿದೆ ಎಂದು ವಿದ್ಯಾರ್ಥಿ ತಂಡದ ನಾಯಕ ಅಲಿಸ್ಟರ್ ಸುಜಿತ್ ಲಸ್ರಾದೊ ವಿವರಿಸಿದರು.

**ಪ್ರಧಾನಿಗೆ ಪತ್ರ:** ಸೇತುವೆ ನಿರ್ಮಾಣ ಮತ್ತು ನೀರಿನ ಸೌಲಭ್ಯ ಕಲ್ಪಿಸುವ ಬಗ್ಗೆ ಸಚಿವ ಯು.ಟಿ. ಖಾದರ್ ಮೂಲಕ ರಾಜ್ಯ ಸರಕಾರಕ್ಕೆ ಮತ್ತು ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲಾಗಿದೆ. ಪ್ರಧಾನಿಗೆ ಎ. 6ರಂದು ಪತ್ರ ಬರೆಯಲಾಗಿದ್ದು ಎ. 10ರೊಳಗೆ ಕ್ರಮ ಕೈಗೊಳ್ಳುವ ಬಗ್ಗೆ ಸಂದೇಶ ಬಂದಿದೆ. ಸೇತುವೆ ನಿರ್ಮಾಣಕ್ಕೆ 5 ಕೋ.ರೂ. ತುರ್ತಾಗಿ ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಲಾಗುವುದು ಎಂದು ಸಚಿವ ಖಾದರ್ ಹೇಳಿದ್ದಾರೆ ಎಂದು ಹೇಳಿದರು.

~ಮುಂಜಾನೆ ಮಾತು ~
ಜೀವನವೆಂದರೆ ಹಾಗೇ. ಏರಿಳಿತಗಳಿಂದ ಕೂಡಿದೆ. ಸದಾ ಎತ್ತರದಲ್ಲಿ ಇರುತ್ತೇನೆ ಅಂದರೆ ಆಗದು ಅಂತೆಯೇ ಇಳಿತವೂ ತಾತ್ಕಾಲಿಕವೇ. ಎರಡಕ್ಕೂ ಹೊಂದಿಕೊಳ್ಳೋಣ !

ಇಂದು ವಿಶ್ವ ಪುಸ್ತಕ ದಿನ

# ವಿಜಯವಾಣಿ

ಕನ್ನಡಿಗರ ಧ್ವನಿ

ಕನ್ನಡ ದಿನಪತ್ರಿಕೆ 1

ಕೆಎಎಸ್ ಫಲಿ



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 23

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 23 ಏಪ್ರಿಲ್ 2017 | ಭಾನುವಾರ 23 AP

CENTRAL LIBRARY

# ಸೇತುವೆ ನಿರ್ಮಿಸಿ ಉಳಿಯ ನಾಗರಿಕರ ಉಳಿಸಿ

## ಕೇಂದ್ರ, ರಾಜ್ಯ ಸರ್ಕಾರದ ಬೆನ್ನುಬಿದ್ದ ಟೀಮ್ ಟ್ರಿಗೋನ್ ವಿದ್ಯಾರ್ಥಿ ವೇದಿಕೆ!

**ವಿಜಯವಾಣಿ ಸುದ್ದಿಜಾಲ** ಮಂಗಳೂರು

ಸುತ್ತಲು ನೀರು ಆವರಿಸಿಕೊಂಡಿರುವ ದಕ್ಷಿಣ ಕನ್ನಡದ ಪೂರ್ಣಪ್ರಮಾಣದ ಏಕೈಕ ದ್ವೀಪ ಪಾವೂರು ಉಳಿಯ ಪ್ರದೇಶಕ್ಕೆ ಸೇತುವೆ ನಿರ್ಮಿಸಿ ಸ್ಥಳೀಯ ನಿವಾಸಿಗಳನ್ನು ರಕ್ಷಿಸುವಂತೆ ವಿದ್ಯಾರ್ಥಿಗಳ 'ಟೀಮ್ ಟ್ರಿಗೋನ್' ತಂಡ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬೆನ್ನು ಬಿದ್ದಿದೆ!

**ದ.ಕ. ಜಿಲ್ಲೆಯ ಏಕೈಕ ಪೂರ್ಣ ಪ್ರಮಾಣದ ದ್ವೀಪವಿದು**

ಅಡ್ಯಾರು ಸಂಪರ್ಕಿಸುವ ಸೇತುವೆ, ನೀರು ಶುದ್ಧೀಕರಣ ಘಟಕ ಹಾಗೂ ತ್ಯಾಜ್ಯ ನಿರ್ವಹಣೆ ವ್ಯವಸ್ಥೆ ನಮ್ಮ ಮುಖ್ಯ ಬೇಡಿಕೆ ಎಂದು 'ಟೀಮ್ ಟ್ರಿಗೋನ್' ತಂಡದ ಅಲಿಸ್ಟರ್‌ಸುಜಿತ್ ಲಸ್ರಾದೊ ಅವರು ಅಡ್ಯಾರು ಉಳಿಯಕ್ಕೆ ಶನಿವಾರ ಭೇಟಿ ನೀಡಿದ ಸುದ್ದಿಗಾರರಿಗೆ ತಿಳಿಸಿದರು.

ಕಳೆದ ಒಂದು ವರ್ಷದಿಂದ ಈ ಗ್ರಾಮದ ಸಮಗ್ರ ಸಮೀಕ್ಷೆ ನಡೆಸಿರುವ ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್‌ಕಾಲೇಜಿನ 'ಟೀಮ್ ಟ್ರಿಗೋನ್' ಹೆಸರಿನ ವಿದ್ಯಾರ್ಥಿಗಳ ತಂಡ ಗ್ರಾಮದ ಅಭಿವೃದ್ಧಿಗೆ ಮುಖ್ಯವಾಗಿ ಈ ಮೂರು ತುರ್ತು ಆವಶ್ಯಕತೆಗಳನ್ನು ಮನಗಂಡಿದೆ. ಅಡ್ಯಾರು ರಾಷ್ಟ್ರೀಯ ಹೆದ್ದಾರಿ 75 ಬಳಿಯಿಂದ ಸುಮಾರು 1.5 ಕಿ.ಮೀ.ದೂರದ ಈ ದ್ವೀಪದ ಜನರು ಹೊರಗಿನ ನಾಗರಿಕ ಸೌಲಭ್ಯಗಳನ್ನು ಪಡೆಯಲು ದೋಣಿ ಮೂಲಕ ಸಂಚರಿಸಬೇಕು. ಸಕಾಲದಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯದೆ ಅನೇಕ ಮಂದಿ ಪ್ರಾಣ ಬಿಟ್ಟಿದ್ದಾರೆ. ಸುತ್ತಲು ನೀರು ಇದ್ದರೂ ಕುಡಿಯಲು ಶುದ್ಧ ನೀರಿನ ಆವಶ್ಯಕತೆ ಇದೆ ಎಂದವರು ಹೇಳಿದರು.

ದ್ವೀಪದಲ್ಲಿರುವ ಜನರಿಗೆ ಸೇತುವೆ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪ್ರಧಾನಿಯವರಿಗೆ ಏಪ್ರಿಲ್ 6 ರಂದು ಮೈಲ್ ಮೂಲಕ ಮನವಿ ರವಾನಿಸಲಾಗಿದ್ದು, ಕ್ರಮ ಕೈಗೊಂಡಿರುವ ಬಗ್ಗೆ 10 ರಂದು ಉತ್ತರ ದೊರೆತಿದೆ. ಸೇತುವೆ ನಿರ್ಮಿಸಲು ರಾಜ್ಯ ಸರ್ಕಾರ 2015 ರಲ್ಲಿ 1.5 ಕೋಟಿ ರೂ. ಬಿಡುಗಡೆ ಮಾಡಿದ್ದು, ಯೋಜನೆ ಅನುಷ್ಠಾನಗೊಳ್ಳಲೇ ಇಲ್ಲ. ಬಿಡುಗಡೆಯಾದ ಮೊತ್ತ ರದ್ದುಗೊಂಡಿದೆ ಎಂದವರು ಹೇಳಿದರು.



**ಟೀಮ್ ಟ್ರಿಗೋನ್ ವಿದ್ಯಾರ್ಥಿಗಳ ತಂಡ.**

ಸ್ಥಳದಲ್ಲಿದ್ದ ವಿದ್ಯಾರ್ಥಿ ನಾಯಕರ ದೂರವಾಣಿ ಕರೆ ಸ್ವೀಕರಿಸಿದ ಸ್ಥಳೀಯ ಶಾಸಕ, ಆಹಾರ ಸಚಿವ ಯು.ಟಿ.ಖಾದರ್, ಸೇತುವೆ ನಿರ್ಮಿಸಲು ಮುಖ್ಯಮಂತ್ರಿಯವರ ವಿಶೇಷ ನಿಧಿಯಿಂದ ಐದು ಕೋಟಿ ರೂ. ಪಡೆಯಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ವಿದ್ಯಾರ್ಥಿಗಳ ತಂಡದ ಅಲನ್ ಲೋಯ್ ಡಿಸೋಜ, ಜೊನತಾನ್ ಆಡ್ರಿಲ್ ರೋಡ್ರಿಗಸ್, ಶ್ವೇತಾ ಎಲ್.ಗೊಲ್ಲರಹಳ್ಳಿ, ಅಕ್ಷಯ್, ಮೊಹಮ್ಮದ್ ಇಶ್ವಾಕ್, ಜೆವಿನ್ ಮರಿಯಾ ಡಿಕುನ್ಹಾ, ಚೈತ್ರಾ ಬಿ.ಎಂ., ಅಮೀನ್ ನಝೀರ್, ವಿನ್ಸನ್, ಸುರಕ್ಷಾ ಕೆ.ಎಂ., ಸಮನ್‌ಅಯ್ಯುಬ್, ರಕ್ಷಾ ಮತ್ತು ರಶ್ಮಿತಾ ಉಪಸ್ಥಿತರಿದ್ದರು.

ಭಾನುವಾರ, ಏಪ್ರಿಲ್ 23, 2017 | ಮಂಗಳೂರು | ₹ 5.00 | ಪುಟ 24 + 2 | ಸಂಪುಟ 20 | ಸಂಚಿಕೆ 112

goo.gl/S62nF1 f/prajavani.net @prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ: ಮೂತ್ರ ಕುಡಿದ ತಮಿಳುನಾಡು ರೈತರು 8

ಮುಂದಿನ ಚುನಾವಣೆಗೆ ಮೈತ್ರಿ ಪ್ರಶ್ನೆಯೇ ಇಲ್ಲ: ಸಿ.ಎಂ 4



ಮುಕ್ತಛಂದ



ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಟಿ ಊರ್ವಶಿ ರೌಟೆಲಾ 09

### ಉಳಿಯದ ಉಳಿವಿಗೆ ಮುಂದಾದ ಟ್ರಿಗಾನ್ ವಿದ್ಯಾರ್ಥಿ ತಂಡ

# ಪಾವೂರು–ಉಳಿಯ ಗ್ರಾಮಕ್ಕೆ ತೂಗು ಸೇತುವೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಮಂಗಳೂರು ತಾಲ್ಲೂಕಿನ ಪಾವೂರು ಗ್ರಾಮಕ್ಕೆ ಒಳಪಟ್ಟಂತೆ ಪಾವೂರು ಉಳಿಯ ಎಂಬ ಜನವಸತಿ ಪ್ರದೇಶ. ಈ ಪ್ರದೇಶ ನೇತ್ರಾವತಿ ನದಿ ನೀರಿನಿಂದ ಸುತ್ತಲೂ ಆವೃತ್ತವಾಗಿದ್ದು, ಮಧ್ಯಭಾಗದಲ್ಲಿರುವ ದ್ವೀಪ ಗ್ರಾಮ.

ಇಲ್ಲಿಗೆ ಯಾವುದೇ ಸಂಪರ್ಕ ರಸ್ತೆ ಇಲ್ಲ. ಜನಸಾಮಾನ್ಯರು ಹಾಗೂ ವಿದ್ಯಾರ್ಥಿಗಳಿಗೆ ಸಂಚರಿಸಲು ನಾಡದೋಣಿ ಹೊರತು ಬೇರೆ ಯಾವುದೇ ಸಂಪರ್ಕದ ವ್ಯವಸ್ಥೆ ಇಲ್ಲ. ಮಳೆಗಾಲದಲ್ಲಿ ನೀರಿನ ಹರಿವು ಅತ್ಯಂತ ಹೆಚ್ಚಾಗಿರುವುದರಿಂದ ಸಾರ್ವಜನಿಕರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಬಗ್ಗೆ ಗ್ರಾಮಸ್ಥರು ಹಲವು ಬಾರಿ ಗ್ರಾಮಸಭೆಯಲ್ಲಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಇದನ್ನು ಅರಿತ ಮಂಗಳೂರು ಸಹ್ಯಾದ್ರಿ ಸಿವಿಲ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪಾವೂರು ಉಳಿಯ ಗ್ರಾಮದ ಅಭಿವೃದ್ಧಿಗೆ ಮುಂದಾಗಿದ್ದಾರೆ.

ತೂಗು ಸೇತುವೆ ಹಾಗೂ ಶುದ್ಧ ನೀರಿನ ಘಟಕವನ್ನು ತೆರೆಯಲು ಇಲ್ಲಿನ ವಿದ್ಯಾರ್ಥಿಗಳು ಪಣ ತೊಟ್ಟಿದ್ದಾರೆ. ಇದಕ್ಕಾಗಿ ಒಂದು ವಿಶೇಷ ತಂಡವನ್ನು ರಚಿಸಿದ್ದಾರೆ. ಈ ತಂಡದ ಹೆಸರು 'ಟ್ರಿಗಾನ್'. ಇಲ್ಲಿನ ಗ್ರಾಮಸ್ಥರ ಸಮಸ್ಯೆಗಳನ್ನು ಒಂದೊಂದಾಗಿ ಸರ್ವೆ ಮಾಡಿ ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಲು ಉತ್ಸುಕರಾಗಿದ್ದಾರೆ.



ಮಂಗಳೂರು ಸಹ್ಯಾದ್ರಿ ಕಾಲೇಜಿನ ಟ್ರಿಗಾನ್ ವಿದ್ಯಾರ್ಥಿ ತಂಡ.

**ನಮ್ಮ ಯೋಜನೆಯ ಬಗ್ಗೆ ಸಾಮಾಜಿಕ ತಾಣಗಳಲ್ಲಿ ಪೇಜ್‌ಅನ್ನು ರಚಿಸಿದ್ದು, ದಾನಿಗಳ ನೆರವಿಗಾಗಿ ಕಾಯುತ್ತಿದ್ದೇವೆ**

**ಅಲಿಸ್ಟರ್ ಸುಜಿತ್**

ಟ್ರಿಗಾನ್ ತಂಡದ ಮುಖ್ಯಸ್ಥ

**ಐದು ವರ್ಷದ ಯೋಜನೆಯ ಮೂಲಕ ಈ ದ್ವೀಪವನ್ನು ಪ್ರವಾಸೋದ್ಯಮ ತಾಣವಾಗಿ ಮಾಡುತ್ತೇವೆ.**

**ಅಲೆನ್ ಡಿಸೋಜ**

ಟ್ರಿಗಾನ್ ತಂಡದ ಸದಸ್ಯ

'ಇದಕ್ಕಾಗಿ ಪಂಚವಾರ್ಷಿಕ ಯೋಜನೆಯನ್ನು ಮಾಡಲಾಗಿದೆ. ಮೊದಲು ಸುತ್ತಮುತ್ತಲ ಪ್ರದೇಶವನ್ನು ಸ್ವಚ್ಛ ಮಾಡುವ ಮೂಲಕ ಈ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ' ಎಂದು ಹೇಳುತ್ತಾರೆ ಟ್ರಿಗಾನ್ ತಂಡದ ಮುಖ್ಯಸ್ಥ ಅಲಿಸ್ಟರ್ ಸುಜಿತ್ ಅವರು.

ನದಿಯಲ್ಲಿ ನೀರು ಕಡಿಮೆಯಾದಾಗ ಊರಿನವರು ಸೇರಿ ತಮ್ಮ ಸ್ವಂತ ಖರ್ಚಿನಲ್ಲಿ ಗಾಳಿ ಮರದ ಗುರ್ಜಿ ಮತ್ತು ಹಲಗೆಯಿಂದ ತಾತ್ಕಾಲಿಕ ಸೇತುವೆ ನಿರ್ಮಿಸುತ್ತೇವೆ. ಮಳೆ ಬಂದಾಗ ಈ ತಾತ್ಕಾಲಿಕ ಸೇತುವೆ ಕೊಚ್ಚಿಕೊಂಡು ಹೋಗುತ್ತದೆ. ಅಲ್ಲದೆ ದೋಣಿಯ ಮೂಲಕ ವಿದ್ಯಾರ್ಥಿಗಳಿಗೆ ಶಾಲೆಗೆ ಹೋಗಲು ಹಾಗೂ ಗರ್ಭಿಣಿಯರನ್ನು ಮತ್ತು ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ತೊಂದರೆ ಯಾಗುತ್ತದೆ ಎಂದು ಗ್ರಾಮಸ್ಥರು ತಮ್ಮ ಅಳಲನ್ನು ತೋಡಿಕೊಂಡರು.

ಈ ತಂಡಕ್ಕೆ ಸಹಾಯ ಮಾಡುವವರು ಹೆಚ್ಚಿನ ಮಾಹಿತಿಗಾಗಿ 8123522056, 9900691644, 7019848534 ಅನ್ನು ಸಂಪರ್ಕಿಸಬಹುದು.

## 'ಒರಿಯೊ ದ್ವೀಪ' ಎಂದು ನಾಮಕರಣ

'ಇದು ನಮ್ಮ ತಂಡದ ಕನಸಿನ ಯೋಜನೆಯಾಗಿದೆ. ಅಲ್ಲದೆ ಪಾವೂರು ಉಳಿಯ ದ್ವೀಪಕ್ಕೆ 'ಒರಿಯೊ ದ್ವೀಪ' ಎಂದು ನಾಮಕರಣ ಮಾಡಿದ್ದೇವೆ. ಈ ದ್ವೀಪಕ್ಕೆ ಬೇಕಾಗುವ ಮೂಲ ಸೌಲಭ್ಯವನ್ನು ಒದಗಿಸುವ ಮೂಲಕ ಪ್ರವಾಸೋದ್ಯಮ ತಾಣವನ್ನಾಗಿ ಮಾಡಬೇಕೆಂಬುವುದು ನಮ್ಮ ತಂಡದ ಉದ್ದೇಶ' ಎಂದು ಹೇಳುತ್ತಾರೆ ಟ್ರಿಗಾನ್ ತಂಡದ ಸದಸ್ಯ ಜೊನಾಥನ್ ರೋಡ್ರಿಗಸ್.

**ಮಳೆಗಾಲದಲ್ಲಿ ನೀರಿನ ಹರಿವು ಹೆಚ್ಚಿರುವ ಕಾರಣ ನಾಡದೋಣಿಯಲ್ಲಿ ಸಂಚರಿಸಲು ಅಸಾಧ್ಯ**

**ಗ್ರೇಶಿಯಸ್ ಡಿಸೋಜ**

ಗ್ರಾಮಸ್ಥ

## ಪಾವೂರು ಉಳಿಯ ಗ್ರಾಮ

ಅಡ್ಯಾರ್ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಪಕ್ಕದ ರಸ್ತೆಯಿಂದ ಕೊಂಚ ಸಾಗಿದಾಗ ನೇತ್ರಾವತಿ ನದಿ ನೀರಿನಿಂದ ಆವೃತ್ತವಾಗಿರುವ ಪಾವೂರು ಉಳಿಯ ದ್ವೀಪ ಕಾಣುತ್ತದೆ. ಇಲ್ಲಿಗೆ ತಲುಪಲು ದೋಣಿಯ ಮೂಲಕ ಪ್ರಯಾಣಿಸಬೇಕು.

ಸುಮಾರು 45ಕ್ಕೂ ಹೆಚ್ಚು ಮನೆಯಿದ್ದು 250ಕ್ಕೂ ಹೆಚ್ಚು ಮತದಾರರಿದ್ದಾರೆ. ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಇರುವ ಸರ್ಕಾರಿ ಶಾಲೆ ಮುಚ್ಚಲಾಗಿದೆ. ಸ್ಮಶಾನ ಹಾಗೂ ಚರ್ಚ್ ಅನ್ನು ಹೊಂದಿರುವ ಗ್ರಾಮದ ಜನತೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

SUNDAY TIMES OF INDIA
Bennett, Coleman & Co. Ltd
APRIL 23, 2017 | PAGES 18 | INCLUDING TIMESLIFE! | TIMESOFINDIA.COM | EPAPER.TIMESOFINDIA.COM



**Rajamouli Relieved**
Kannada outfits end stir, 'Baahubali 2' will release 7

**Visa Woes**
India raises H1-B concerns with higher-ups in US 8

**'Lead By Example'**
Rahul takes a dig at PM over advice on social media use 7

MANGALURU

# Engg students try to bridge Pavoor-Uliya island to mainland

Kevin.mendonsa
@timesgroup.com

**Mangaluru:** Flavia D'Souza, a homemaker from Pavoor-Uliya island, could not save her husband Basil D'Souza, who suffered a heart attack 17-years ago because he could not reach the hospital on time. Reason: The island, 10km from the city, has no connectivity and the residents depend on a countrymade boat to reach the main land.

It's not the sad story of Flavia alone but one of the around 36 families comprising 200 persons on this island. Due to apathy of the people's representatives and the district administration, these people are living in stone-age like era, cut-off from the outer world. Their problems get aggravated when the river swells during rainy season. Risking their lives every day, children cross the river to go to schools and colleges.


The 50-acre Island can be reached only by rowing for around 800 metres and one has to then take a two-wheeler ride towards the highway for a further 1.5km. "Everyday is full of adventure for us. Juggling between boat, overflowing river with strong currents and rains, we try to cross the Nethravati and go to schools," shares a student.

The Island has around 30 students studying in various schools and colleges. To go to the other end, they have to assemble near a boat boarding area by 6.30am. "As there is salt water, we need atleast 4-5 pairs of footwear every year and we skip classes whenever there is heavy flood in the river," a students adds.

Earlier there was a government primary school but it was closed as teachers were unwilling to come. Even the residents have to cross a river and travel almost one kilometre just even to buy the grocery. They pay one and half times more money to get a LPG cylinder transported to their houses. Also, they haven't constructed any new houses from several decades as transportation of raw materials cost them more.

Most of the island dwellers here eke out their livelihood by inland fishing and rolling beedis. However, due to rampant sand mining and other ecological imbalance, fishing activity has reduced and they are forced to take up alternative jobs outside their territory.

Though they live surrounded by water, they do not have potable water for consumption. Only one well situated adjacent to the chapel has potable water and the entire village depends on it. "We are forced to drink salt water. We first boil then consume it," says Sweetie D'Souza, a student.



Residents of Pavoor-Uliya island depend on a country-made boat to cross Netravathi river to reach Mangaluru

**MINISTER SPEAKS**

"The government had sanctioned 1.5cr to construct a bridge in 2015. As there was delay in the tender process, the sanction was withdrawn. However, now the cost of project has escalated to Rs 5.5 crore and I have requested the CM for funds

**U T Khader** | LOCAL MLA & FOOD AND CIVIL SUPPLIES MINISTER

**Engineers on a mission to save island**

Alister Sujith Lasrado, a mechanical engineer from Sahyadri College of Engineering and Management, who accidentally ventured into the island, learnt about the problems of the people there and along with other 18 budding engineers is on a mission to save this island.

The team named as 'Trigon' is running from pillar to post, meeting people's representatives from Pavoor-Uliya gram panchayat to provide relief to the residents of the island. They have also written to Prime Minister Narendra Modi explaining the situation. The team has spent around a year inspecting their problems and finding a solution.

As a first step, they are raising funds to install RO water facility in the island. "We are doing it by online fund raising and hope to complete project by August," Alister added.

DH
DECCAN HERALD
Mangaluru, Sunday April 23, 2017
Pages 34 Vol 18 No 112 ₹6.00 M.. www.deccanherald.com

CENTRAL LIBRARY

SUNDAY EDITION





Rajamouli and his epic films



Mum is

It's time Kashmi

Spotlight, P





Engineering student Alister Sujith Lasrado explains the plight of islanders on Infant Jesus Chapel premises at Pavoor Uliya island on the outskirts of Mangaluru on Saturday. (Right) Team members of 'Trigon' embark on the boat for a group photo after a visit to the island.

# 'Trigon' triggers new hope among Pavoor Uliya islanders

## Sahyadri engg college students work for the cause for people

Sreekantswamy B

**PAVOOR ULIYA (MANGALURU): It was way back in 1968, the spectre of mass eviction was looming large on 50 and odd families at Pavoor Uliya island on the outskirts of Mangaluru.**

However, a chapel, named Infant Jesus Chapel, was built to keep the flock of majority Christian population together, dissuading them from falling prey to any such rehabilitation packages from the government. Four decades have elapsed and yet there is no sign of authorities refraining from shifting the left over 38 families here.

However, their demand for adequate basic facilities, mainly bridge connecting Uliya Pavoor and Adyar, remains a pipe dream. In the absence of surface transport, rowing boat is the only mode of transportation, ferrying people from either side, indeed with danger lurking as and when the water level at river Netravathi brims, mainly during monsoon.

Now, the dwellers have found a ray of hope in 'Trigon', a 14-member team of engineering students, a mix of civil engineering and mechanical, from Sahyadri College of Engineering and Management. The team members with a motto 'Make A Change' (MAC) and led by Alister Sujith Lasrado have been running from pillar to post from the past one year to ensure that the islanders here get their due.

Alister said, "I have mailed a letter to the Prime Minister's Office (PMO) on April 6 itself explaining the plight of people living here. An acknowledgement was received on April 10 saying that action is in the making."

### Common plan

Alister and his like-minded friends have a common plan -- to impress upon authorities for building a bridge, setting up reverse osmosis (RO) plant to ensure safe drinking water for islanders and a five-year plan for the benefit of the locals. Most importantly, sewage lines on the foot way that connects the shore from national highway 66.

On one hand, they have been keeping track of local MLA and Food and Civil Supplies Minister U T Khader promise to build a bridge, for which an enhanced estimate of Rs 5 crore is ready, while on the other hand, they are attending meetings at gram panchayat to keep the pressure up in local level.

They have also been doing their bit to raise funds for setting up RO plant as most of the people depend on salt water for drinking purpose. They have launched google forms a week ago and have succeeded in collecting Rs 5,000 already, a good start indeed, they claim in chorus.

### A year ago

Alister said, a year ago, attempts were made again to shift them in the name of rehabilitation to Innoli.

Some officials from Pavoor Gram Panchayat had also visited them to process the formalities. But the people resisted, thus restraining the officials from going ahead with 'eviction' plans.

Unwilling to shift to elsewhere, they want the authorities to build the bridge, while the rest will be taken care of by the 'Lord'.

### How it all started

How the plight of islanders at Pavoor Uliya came to focus again is a rather intriguing story.

It all happened on last Shivaratri day, when Alister bunked classes.

With a penchant for exploring new places, he thought of visiting the island near to his college. Till then, he had heard about the island only from his policeman father, who had jotted details about it in his beat book.

Since then, Alister frequented the island for six months only to understand travails faced by the people. It was not that easy, with islanders sensing something amiss in a new face on their land. However, it was momentary, as Alister explained them about the purpose of his visit to do his bit for their cause. Since then there was no turning back and also the 'one-man force' was joined by his two other friends Allan Loy D'Souza and Jonatha Adriel Rodrigues making for 'Trigon' (meaning triangular). They found 11 more like-minded friends in Shwetha Gollarahalli, Akshay, Mohammed Ifshaq, Jevin Maria D'Cunha, Chaithra B M, Ameen Nazeer, Vinson, Suraksha K M, Saman Ayyub, Raksha and Rashmitha.

### Pavoor to 'Oreo Island'

Whenever 'Trigon' members mark any achievement, they gather at their regular jaunt opposite college for drinking 'Oreo shake' (a mix of oreo and milk). Inspired, they have renamed 'Pavoor Uliya' island as 'Oreo Island', that regularly features in their conversation as 'Oreo...'

Not just that, if they come across any people from the island, they call them as 'Oreo people', 'Oreo Kids'. For any other thing, 'Oreo' is the prefix.

DH News Service